ಕಾರ್ಯಪಾಲಕ ಅಭಿಯಂತರರ ಕಛೇರಿ
ನಂ.2ನೇ ಕಟ್ಟಡಗಳ ವಿಭಾಗ,
ಲೋಇ ಅನೆಕ್ಸ್ ಕಟ್ಟಡ, 1ನೇ ಮಹಡಿ,
ಕೆ.ಆರ್. ವೃತ್ತ, ಬೆಂಗಳೂರು 01.

ದೂರವಾಣಿ : 080-22122856
ಫ್ಯಾಕ್ಸ್ : 080-22123368
ಇ ಮೇಲ್: eebldno2@gmail.com

(ಲೋಕೋಪಯೋಗಿ ಇಲಾಖೆ)

ಸಂಖ್ಯೆ:ಕಾನಿಇಂ:ಕವಿ2:ಸ.ಇಂ-1:2025-26/6061 ದಿನಾಂಕ: 24/2/26

ಇವರಿಗೆ:

Trustee,
Jnana Sweekar Foundation
Jnana Sweekar Public School,
Sy No. 19/1 & 19/2, Kanakapura Main Road,
Thalagattapura, Bengaluru-560062.

ಮಾನ್ಯರೆ,

ವಿಷಯ: Trustee, Jnana Sweekar Foundation ರವರ ವತಿಯಿಂದ ನಡೆಯುತ್ತಿರುವ Jnana Sweekar Public School, Sy No. 19/1 & 19/2 Kanakapura Main Road, Thalagattapura, Bengaluru-560062 ರವರ ಶಾಲಾ ಕಟ್ಟಡಕ್ಕೆ ಸ್ಥಿರತೆಯ ನವೀಕರಣ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ
1) ಕರ್ನಾಟಕ ಸರ್ಕಾರದ ಸಚಿವಾಲಯ ವಿಕಾಸ ಸೌಧ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಲೋ.ಇ.59. ಬಿಇಡಿ 2019 ದಿ:06-05-2022.
2) ತಮ್ಮ ಮನವಿ ಪತ್ರದ ದಿ: 27-01-2026.
3) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.9ನೇ ಕಟ್ಟಡಗಳ ಉಪ ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ:1704/2025-26, ದಿ:18-02-2026

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Trustee, Jnana Sweekar Foundation ರವರ ವತಿಯಿಂದ ನಡೆಯುತ್ತಿರುವ Jnana Sweekar Public School, Sy No. 19/1 & 19/2 Kanakapura Main Road, Thalagattapura, Bengaluru-560062 ರವರ ಶಾಲಾ ಕಟ್ಟಡಕ್ಕೆ ಸ್ಥಿರತೆಯ ನವೀಕರಣ ಪ್ರಮಾಣ ಪತ್ರವನ್ನು ನೀಡುವಂತೆ ಉಲ್ಲೇಖಿತ ಪತ್ರ (2)ರಲ್ಲಿ ಕೋರಿರುತ್ತೀರಿ.

ಉಲ್ಲೇಖ (3)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.9ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರು ರವರು ಕಟ್ಟಡವನ್ನು ದಿನಾಂಕ: 10-02-2025 ರಂದು ಶಾಲೆಯ ಸಿಬ್ಬಂದಿಯವರ ಸಮ್ಮುಖದಲ್ಲಿ ಜಂಟಿ ಪರಿವೀಕ್ಷಿಸಲಾಯಿತು. ಈ ಸಮಯದಲ್ಲಿ ಮೇಲ್ನೋಟಕ್ಕೆ ಕಟ್ಟಡವು ಸದೃಢವಾಗಿದೆ ಎಂದು ಅಭಿಪ್ರಾಯಿಸಲಾಯಿತು ಹಾಗೂ ಕಟ್ಟಡದ ಮೇಲ್ಛಾವಣಿಯಲ್ಲಿ ಜಲನಿರೋಧಕ ಪದರವನ್ನು ಅಳವಡಿಸಿ ಮಳೆನೀರು ಸರಾಗವಾಗಿ ಹರಿಯಲು, ನೆಲ ಮಹಡಿಯ ಶೌಚಾಲಯದಿಂದ ತಳಮಹಡಿಯ ಛಾವಣಿಯಲ್ಲಿ ತೇವಾಂಶ ಕಂಡುಬಂದಿದ್ದು ಹಾಗೂ ತಳಮಹಡಿಯ ಮುಂಭಾಗದ ಗೋಡೆಯಲ್ಲಿ ತೇವಾಂಶ ಕಂಡುಬಂದಿದ್ದು ಮತ್ತು ಕೆಲವು ಹೊರಭಾಗದ ಗೋಡೆಗಳಲ್ಲಿ ಬಿರುಕುಗಳು ಕಂಡುಬಂದಿದ್ದು ಸೂಕ್ತ ರೀತಿಯಲ್ಲಿ ದುರಸ್ಥಿಗೊಳಿಸಲು ಸೂಚಿಸಲಾಯಿತು. ಸದರಿ ಕಟ್ಟಡವನ್ನು ನಿರ್ವಹಣೆ ಮಾಡುವ ಜವಾಬ್ದಾರಿಯು ಸದರಿ ಸಂಸ್ಥೆಯವರದ್ದಾಗಿರುತ್ತದೆ.ಉಲ್ಲೇಖ (1)ರ ಸರ್ಕಾರದ ಸುತ್ತೋಲೆಯನ್ವಯ ಹಾಗೂ ಉಲ್ಲೇಖ (3)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿವೀಕ್ಷಿಸಿ ಶಿಫಾರಸ್ಸು ಮಾಡಿರುವ ಹಿನ್ನಲೆಯಲ್ಲಿ ಈ ಕೆಳಕಂಡ ಷರತ್ತುಗಳನ್ನೊಳಪಟ್ಟು ಸದರಿ ಕಟ್ಟಡವು "STRUCTURALLY STABLE" ಎಂದು ಪರಿಗಣಿಸಿ ನಿರಾಕ್ಷೇಪಣಾ ಪತ್ರವನ್ನು ದಿನಾಂಕ:20-02-2026 ರಿಂದ 19-02-2031 ರವರೆಗೆ ನೀಡಲಾಗಿದೆ.

1) ಸದರಿ ಕಟ್ಟಡವನ್ನು ನಿರ್ವಹಣೆ ಮಾಡುವ ಜವಾಬ್ದಾರಿಯು ಸದರಿ ಸಂಸ್ಥೆಯವರದಾಗಿರುತ್ತದೆ.

2) ಅಗ್ನಿ ಶಾಮಕ ಇಲಾಖೆಯಿಂದ ಅಗ್ನಿ ಸುರಕ್ಷತಾ ಪ್ರಮಾಣ ಪತ್ರ (Fire Safety Compliance) ಮತ್ತು ಇತರೆ ಅವಶ್ಯಕ ಅನುಮತಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

3) ಕಟ್ಟಡವನ್ನು ಕಾಲಕಾಲಕ್ಕೆ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನೆ ಬಳಸಿ ತಜ್ಞರಿಂದ ವ್ಯವಸ್ಥಿತವಾಗಿ ವಾರ್ಷಿಕ ನಿರ್ವಹಣೆ ಮಾಡತಕ್ಕದ್ದು.

4) ವಿದ್ಯಾರ್ಥಿಗಳ, ಸಿಬ್ಬಂದಿಗಳ ಹಾಗೂ ಶಿಕ್ಷಕರ ಸುರಕ್ಷತೆಗೆ ಸಕಲ ವ್ಯವಸ್ಥೆಯನ್ನು ನೀಡಿ ಸೂಕ್ತ ಸುರಕ್ಷತಾ ವ್ಯವಸ್ಥೆಯನ್ನು ನಿಯಮಾನುಸಾರ ಅಳವಡಿಸತಕ್ಕದ್ದು.

5) ಕಟ್ಟಡದ ಸಧೃಡತೆಗೆ ದಕ್ಕೆಯಾಗುವಂತಹ ಯಾವುದೇ ಇತರೆ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕೈಗೊಳ್ಳತಕ್ಕದಲ್ಲ.

6) ಮುಂದಿನ ದಿನಗಳಲ್ಲಿ ಕಟ್ಟಡದ ಯಾವುದಾದರು ಬದಲಾವಣೆ ಅಥವಾ ನಿರ್ಮಾಣವನ್ನು ಸಂಬಂಧಪಟ್ಟ ಪ್ರಾಧಿಕಾರದ ಅನುಮತಿ ಇಲ್ಲದೆ ಮಾಡಿದ್ದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುತ್ತದೆ.

7) ಕುಡಿಯುವ ನೀರು ಹಾಗೂ ಶೌಚಾಲಯಗಳಲ್ಲಿ ಸದಾ ಸ್ವಚ್ಛತೆಯನ್ನು ಕಾಪಾಡಿಕೊಳ್ಳತಕ್ಕದ್ದು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ ಕಾಲೇಜಿಗೆ ಸಂಬಂಧಿಸಿದ ಎಲ್ಲಾ ನಿರ್ದೇಶನ ಹಾಗೂ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ತಮ್ಮ ವಿಶ್ವಾಸಿ,

ಸಹಿ/-
ಕಾರ್ಯಪಾಲಕ ಅಭಿಯಂತರರು,
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.

ಪ್ರತಿಯನ್ನು :

1. ಉಪ ನಿರ್ದೇಶಕರು (ಆಡಳಿತ), ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ದಕ್ಷಿಣ ಜಿಲ್ಲೆ. ಕಲಾಸಿಪಾಳ್ಯ, ಬೆಂಗಳೂರು-560002 ರವರ ಮಾಹಿತಿಗಾಗಿ ಮತ್ತು ಸದರಿ ಧೃಢೀಕರಣ ಪತ್ರ ತಲುಪಿದ ಕೂಡಲೇ ಈ ಕಛೇರಿಯಿಂದ ಧೃಢೀಕರಣ ನೀಡಲಾಗದಿಯೇ ಎಂದು ಮರು ಟಪಾಲಿನಲ್ಲಿ ಈ ಕಛೇರಿಗೆ ಸಲ್ಲಿಸಿ ಧೃಢೀಕರಿಸಿಕೊಳ್ಳುವುದು.
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.9ನೇ ಕಟ್ಟಡಗಳ ಉಪವಿಭಾಗ, ಬೆಂಗಳೂರು ರವರ ಮಾಹಿತಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಲೆಕ್ಕಪರಿಶೋಧನಾಧಿಕಾರಿಗಳು, ವಿಭಾಗ ಕಚೇರಿ ರವರ ಮಾಹಿತಿಗಾಗಿ.
4. ಕಛೇರಿ ಕಡತಕ್ಕೆ.

ಕಾರ್ಯಪಾಲಕ ಅಭಿಯಂತರರು,
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.